# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 689 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 22.07.2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೆ.ಎಸ್.ಎಂಎಸ್ಸಿ.ಎಲ್ ನಿಗಮದ ಅಧಿಕಾರಿಗಳು ಪ್ರಾಣಿಗಳಿಗೆ ಬಳಸುವ ರಿಂಗರ್ ಲ್ಯಾಕ್ಟೀಟ್ ಗ್ಲೋಕೋಸ್ ಔಷಧಿ ಖರೀದಿಸಿರುವುದು ನಿಜವೇ: ಹಾಗಿದ್ದಲ್ಲಿ ಅದರ ಮೌಲ್ಯವೆಷ್ಟು; ವಿವರ ನೀಡುವುದು: (ಕಳೆದ ಆರ್ಥಿಕ ಸಾಲಿನ) | • ಕೆ.ಎಸ್.ಎಂ.ಎಸ್.ಸಿ.ಎಲ್ ನಿಗಮದಿಂದ ಪ್ರಾಣಿಗಳಿಗೆ ಬಳಸುವ Ringer Lactate Glucose ಔಷಧಿ ಖರೀದಿಸಿರುವುದಿಲ್ಲ.<br>• ಕೆ.ಎಸ್.ಎಂ.ಎಸ್.ಸಿ.ಎಲ್ ನಿಗಮವು ಮಾನವ ಬಳಕೆಗಾಗಿ Ringer Lactate Glucose ಔಷಧಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಾರ್ಷಿಕ ಬೇಡಿಕೆಯಂತೆ, ಇಲಾಖೆಯ ಅಧೀನದಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ಖರೀದಿಸಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (KSMSCL) ಸಂಸ್ಥೆಯಿಂದ ಮಾನವ ಬಳಕೆಯ Ringer Lactate ಔಷಧಿಯನ್ನು ಖರೀದಿಸಲು KTPP ನಿಯಮಾನುಸಾರ ಟೆಂಡರ್‌ಆಹ್ವಾನಿಸಿ M/s. PASCHIM BANGA PHARMACEUTICAL, West Bengal ಸಂಸ್ಥೆಯವರಿಗೆ ರೂ. 5,65,18,465.50/-ಮೊತ್ತದ 29,90,395 ಪ್ರಮಾಣಗಳ Ringer Lactate Infusion IP 500ml FFS IP 1x500ml ಅನ್ನು ಪೂರೈಸಲು ದಿನಾಂಕ:05/09/2023 ರಂದು ಖರೀದಿ ಆದೇಶ ನೀಡಲಾಗಿರುತ್ತದೆ. |
| (ಆ) | ಸದರಿ ಔಷಧಿಗಳನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡಿ ಕಳಪೆ ಗ್ಲೋಕೋಸನ್ನು ಗರ್ಭಣಿಯರಿಗೆ ನೀಡಿ ಅದರಿಂದ ಗರ್ಭಣಿಯರು ಮೃತಪಟ್ಟಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಮೃತಪಟ್ಟವರ ಸಂಖ್ಯೆ ಎಷ್ಟು; | ಕಳಪೆ ಗ್ಲೋಕೋಸ್‌ನಿಂದ ಗರ್ಭಿಣಿಯರು ಮೃತಪಟ್ಟಿರುವುದಿಲ್ಲ. |
| ಇ) | ಔಷಧಿ ನಿಯಂತ್ರಣ ಇಲಾಖೆ ನಡೆಸಿದ್ದ ಪ್ರಯೋಗಾಲಯದಲ್ಲಿ ಸದರಿ ಔಷಧಿ ಕಳಪೆ ಎಂಬುದು ಸಾಬೀತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರದ ಕ್ರಮದ ವಿವರ ನೀಡುವುದು: | • ಔಷಧಿ ನಿಯಂತ್ರಣ ಇಲಾಖೆ ನಡೆಸಿದ ಪ್ರಯೋಗಾಲಯ ಪರೀಕ್ಷೆ ವರದಿಯಲ್ಲಿ ಸದರಿ ಔಷಧಿಯ ಕೆಲವು ಬ್ಯಾಚ್‌ಗಳು ಗುಣಮಟ್ಟವಲ್ಲದ ಔಷಧಿ ಎಂದು ವರದಿಯಾಗಿರುತ್ತದೆ.<br>• Ringer Lactate Glucose ಔಷಧಿಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ, ಇಲ್ಲಿಯವರೆಗೆ ತಯಾರಕರು 196 ಬ್ಯಾಚ್‌ಗಳಲ್ಲಿ 22,83,631 ಯುನಿಟ್‌ಗಳನ್ನು (76.37%) ಪೂರೈಸಿದ್ದಾರೆ.) ಈ ಬಗ್ಗೆ ವಿವರ ಕೆಳಕಂಡಂತಿದೆ.<br><br><u>ಗುಣಮಟ್ಟ ನಿಯಂತ್ರಣ ಕ್ರಮಗಳು:</u><br><br>• ಖರೀದಿ ಆದೇಶವನ್ನು ದಿನಾಂಕ:05/09/2023 ರಂದು ನೀಡಲಾಯಿತು ಮತ್ತು ದಿನಾಂಕ:21/09/2023 ರಿಂದ ಪೂರೈಕೆ ಪ್ರಾರಂಭವಾಗಿರುತ್ತದೆ.<br>• **ತಯಾರಕರು ಅಪ್‌ಲೋಡ್ ಮಾಡಿದ ಆಂತರಿಕ ಮತ್ತು ಸರ್ಕಾರದ ಅನುಮೋದಿತ ಪರೀಕ್ಷಾ** |

ಪ್ರಯೋಗಾಲಯದ ಪರೀಕ್ಷಾ ವರದಿಗಳ ಪ್ರಕಾರ, ಎಲ್ಲಾ ಸರಬರಾಜು ಮಾಡಿದ ಬ್ಯಾಚ್‌ಗಳು ಗುಣಮಟ್ಟದ್ದಾಗಿದೆ ಎಂದು ಕಂಡುಬಂದಿದೆ.

- ಸರಬರಾಜು ಮಾಡಲಾದ 196 ಬ್ಯಾಚ್‌ಗಳಲ್ಲಿ ಇದುವರೆಗೆ 192 ಬ್ಯಾಚ್‌ಗಳನ್ನು KSMSCL ನ NABL ಮಾನ್ಯತೆ ಪಡೆದ ಎಂಪನೆಲ್ಡ್ ಪ್ರಯೋಗಾಲಯಕ್ಕೆ ಗುಣವಿಶ್ಲೇಷಣೆ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, ಉತ್ತಮ ಗುಣಮಟ್ಟವೆಂದು ವರದಿಯಾಗಿರುತ್ತದೆ.
- ಔಷಧ ನಿಯಂತ್ರಣ ಇಲಾಖೆಯಿಂದ 07 ಬ್ಯಾಚ್‌ಗಳ ಗುಣವಿಶ್ಲೇಷಣಾ ವರದಿಗಳನ್ನು ಸ್ವೀಕರಿಸಲಾಗಿದ್ದು, 5 ಬ್ಯಾಚ್‌ಗಳು ಉತ್ತಮ ಗುಣಮಟ್ಟವಲ್ಲವೆಂದು ಹಾಗೂ 2 ಬ್ಯಾಚ್‌ಗಳು ಉತ್ತಮ ಗುಣಮಟ್ಟದ ಮಾದರಿ ಎಂದು ವರದಿಯಾಗಿರುತ್ತದೆ.
- ಉತ್ತಮ ಗುಣಮಟ್ಟವಲ್ಲದ 5 ಬ್ಯಾಚಗಳ ವಿವರ ಈ ಕೆಳಕಂಡಂತಿದೆ.

1. ಚಿತ್ರದುರ್ಗನಲ್ಲಿ ಬ್ಯಾಚ್ ನಂ. 03BF2255 D/M: 10/23 D/E: 09/26
2. ಚಾಮರಾಜನಗರದಲ್ಲಿ ಬ್ಯಾಚ್ ಸಂಖ್ಯೆ., 03BF2258, D/M: 10/23 D/E: 09/26
3. ಹಾಸನ ಬ್ಯಾಚ್ ಸಂಖ್ಯೆ.,03BP0095, D/M: 11/23 D/E: 10/26 .
4. ತುಮಕೂರು ಬ್ಯಾಚ್ ಸಂಖ್ಯೆ.,03BF2235, D/M: 09/23 D/E: 08/26
5. ಕಲಬುರ್ಗಿ ಬ್ಯಾಚ್ ಸಂಖ್ಯೆ.,03BF2322, D/M: 12/23 D/E: 11/26

- NSQ ಘೋಷಣೆಯ ನಂತರ ತೆಗೆದುಕೊಳ್ಳಲಾದ ಆಡಳಿತಾತ್ಮಕ ಕ್ರಮಗಳು:

ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳ ಪ್ರಕಾರ:

1. ಈ ಉತ್ಪನ್ನವನ್ನು ದಿನಾಂಕ:22/03/2024 ರಂದು KSMSCL ನಿಂದ ಕಪ್ಪುಪಟ್ಟಿಗೆ ಸೇರಿಸಲಾಗಿದೆ.
2. ಉತ್ಪನ್ನದ ಹೆಚ್ಚಿನ ವಿತರಣೆಯನ್ನು ತಪ್ಪಿಸಲು KSMSCL ನ ಔಷಧ ಸಾಫ್ಟ್‌ವೇರ್‌ನಲ್ಲಿ 23/03/2024 ರಂದು ರಾಜ್ಯದಾದ್ಯಂತ ಜಿಲ್ಲಾ ಗೋದಾಮುಗಳು ಮತ್ತು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ Ringer Lactate Infusion IP 500ml ನ ಎಲ್ಲಾ ಸ್ಟಾಕ್ ಅನ್ನು ಫ್ರೀಜ್ ಮಾಡಲಾಗಿದೆ.
3. ಎಲ್ಲಾ ವೇರ್‌ಹೌಸ್ ಉಸ್ತುವಾರಿಗಳು, ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು DHO ಗಳಿಗೆ ತಕ್ಷಣವೇ ಜಾರಿಗೆ ಬರುವಂತೆ ಹೇಳಿದ ರಿಂಗರ್ ಲ್ಯಾಕ್ಟೇಟ್ ಇನ್ಫ್ಯೂಷನ್ IP 500ml ಉತ್ಪನ್ನವನ್ನು ಬಳಸದಂತೆ ಸೂಚನೆ ನೀಡಲಾಗಿದೆ.
4. Ringer lactate infusion IP 500ml ನ ಎಲ್ಲಾ ಸರಬರಾಜು ಮಾಡಿದ ಬ್ಯಾಚ್‌ಗಳ ಬದಲಿ ಔಷಧ ಪೂರೈಸಲು ದಿನಾಂಕ: 23/03/2024 ರಂದು ಸೂಚನೆ ನೀಡಲಾಗಿದೆ.

ದಿನಾಂಕ:22/03/2024 ರಂದು KSMSCL ನಿಂದ ಕಪ್ಪುಪಟ್ಟಿಗೆ ಸೇರಿಸಲಾಗಿರುವ ಆದೇಶವನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯವು ಮುಂದಿನ ವಿಚಾರಣೆಯ ದಿನಾಂಕದವರೆಗೆ ತಡೆಹಿಡಿಯುವ ಮಧ್ಯಂತರ ಆದೇಶವನ್ನು ನೀಡಿರುತ್ತದೆ.

| | | |
|---|---|---|
| (ಈ) | ಮಾನವನಿಗೆ ನೀಡುವ ಔಷಧಿ ಬದಲು ಪಶುಗಳಿಗೆ ಬಳಸುವ ಔಷಧಿ ಸರಬರಾಜು ಮಾಡಿದ್ದು, ಅಂತಹ ಬೇಜಬ್ದಾರಿ ವಹಿಸಿದಂತಹ ರೋಗಿಗಳ ಜೀವನದಲ್ಲಿ ಚೆಲ್ಲಾಟವಾಡಿ ಅಧಿಕಾರಿ/ನೌಕರರಿಗೆ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು? | ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (KSMSCL) ಮನುಷ್ಯರ ಬಳಕೆಗೆ ಯಾವುದೇ ಪಶುಗಳ ಔಷಧವನ್ನು ಖರೀದಿಸಿರುವುದಿಲ್ಲ ಹಾಗೂ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿರುವುದಿಲ್ಲ. |

**ಸಂಖ್ಯೆ:**HFW 38 STQ 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು